# ಉಪ್ಪಿ, ನಿರ್ದೇಶನ ಮತ್ತು ಯುದ್ಧ...

''ಪ್ರೇಕ್ಷಕರು ಅತಿ ಬುದ್ಧಿವಂತರು ಎನ್ನುವ ಒಂದೇ ವಿಶ್ವಾಸದಿಂದ 'ಯುಐ' ಸಿನಿಮಾ ಮಾಡಿದ್ದೇನೆ. 'ಎ' ಸಿನಿಮಾ ಮಾಡಿದಾಗ ಪ್ರೇಕ್ಷಕರು ಬುದ್ಧಿವಂತರು ಎಂಬುದನ್ನು ಸಾಬೀತುಪಡಿಸಿದ್ದರು. ನನ್ನ ಪ್ರಕಾರ ಪ್ರೇಕ್ಷಕ, ನಿರ್ದೇಶಕ ಹಾಗೂ ತಂತ್ರಜ್ಞನಿಗಿಂತಲೂ ಮೇಲಿರುತ್ತಾನೆ. ಪ್ರೇಕ್ಷಕರನ್ನು ಗೆಲ್ಲುವುದಕ್ಕೆ ಭಿನ್ನ ಯೋಚನೆ ಬೇಕು. ಒಂದು ಪೋಸ್ಟರ್ ವಿನ್ಯಾಸ ನೋಡಿ ಸಿನಿಮಾ ನೋಡಬೇಕೇ ಬೇಡವೇ ಎನ್ನುವುದನ್ನು ಪ್ರೇಕ್ಷಕ ನಿರ್ಧರಿಸುತ್ತಾನೆ. ಪ್ರೇಕ್ಷಕನೂ ಈಗ ತಂತ್ರಜ್ಞನಾಗಿದ್ದಾನೆ, ಫಿಲ್ಮ್‌ಮೇಕರ್ ಆಗಿದ್ದಾನೆ. ಹೀಗಾಗಿ ಸಿನಿಮಾ ಮಾಡುವುದು ಸುಲಭವಲ್ಲ. 'ಯುಐ'ಯನ್ನು ಡಿಕೋಡ್ ಮಾಡುವುದು ಪ್ರೇಕ್ಷಕರ ಸಾಮರ್ಥ್ಯಕ್ಕೆ ಬಿಟ್ಟಿದ್ದು'' ಎಂದು ನಟ ಉಪೇಂದ್ರ ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಉಪೇಂದ್ರ ನಿರ್ದೇಶನ–ನಟನೆಯ ಬಹು ನಿರೀಕ್ಷಿತ ಸಿನಿಮಾ 'ಯುಐ' ಶೀಘ್ರವೇ ತೆರೆಗೆ ಬರುವ ತಯಾರಿಯಲ್ಲಿದ್ದು, ಈ ಸಿನಿಮಾ ಹಾಗೂ ಸಿನಿಮಾರಂಗದ ಈಗಿನ ಸವಾಲುಗಳ ಬಗ್ಗೆ ಮಾತನಾಡಿದ್ದಾರೆ.

'ಬರೀ ನಟನೆ ಮಾಡುತ್ತೀರಿ, ಹೆಚ್ಚು ನಿರ್ದೇಶನ ಏಕೆ ಮಾಡುತ್ತಿಲ್ಲ' ಎಂದು ತುಂಬಾ ಜನ ಕೇಳುತ್ತಾರೆ. ಆದರೆ ಸಿನಿಮಾ ನಿರ್ದೇಶನ ಎನ್ನುವುದು ದೊಡ್ಡ ಯುದ್ಧದಂತೆ' ಎಂದಿದ್ದಾರೆ.

'ಯುಐ' ಸಿನಿಮಾದ ತಾಂತ್ರಿಕ ವಿಷಯದ ಕುರಿತು ಮಾತನಾಡಿದ ಅವರು, ''ಯುಐ' ಎರಡೂವರೆ ವರ್ಷದ ಪಯಣ. ಸಿನಿಮಾ ಮೇಕಿಂಗ್ ಸ್ಟೈಲ್ ಈಗ ಬದಲಾಗಿದೆ, ಹಿಂದಿನಂತಿಲ್ಲ. ತಂತ್ರಜ್ಞಾನ ಹೊಸದಾದಂತೆ ನಿರ್ಮಾಣ ಶೈಲಿಯೂ ಬದಲಾಗಿದೆ'' ಎಂದು ಸವಾಲಿನ ಬಗ್ಗೆ ಮಾತನಾಡಿದ್ದಾರೆ.

''ಯುಐ' ಮುಗಿದ ತಕ್ಷಣ ವರ್ಷಕ್ಕೆ ಎರಡು ಸಿನಿಮಾ ಮಾಡಬೇಕು ಎಂದುಕೊಂಡಿದ್ದೇನೆ. 'ಯುಐ' ಇಲ್ಲಿಯವರೆಗಿನ ನನ್ನ ಸಿನಿಪಯಣದ ಅತ್ಯಂತ ಹೆಚ್ಚಿನ ಬಜೆಟ್‌ನ ಸಿನಿಮಾ'' ಎಂದಿದ್ದಾರೆ. ನಟ ರಜನಿಕಾಂತ್ ಅವರ ಜೊತೆ 'ಕೂಲಿ' ಸಿನಿಮಾದಲ್ಲಿ ಕೂಡ ಉಪೇಂದ್ರ ನಟಿಸುತ್ತಿದ್ದಾರೆ. ಜೊತೆಗೆ '45' ಸಿನಿಮಾ ಅವರ ಲಿಸ್ಟ್‌ನಲ್ಲಿದೆ.





# ಮಾರ್ನಮಿ ಸಂಭ್ರಮದಲ್ಲಿ ಚೈತ್ರಾ ಆಚಾರ್

'ಟೋಬಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ತಮ್ಮ ಸಹಜ ನಟನೆಯಿಂದ ಗಮನ ಸೆಳೆದಿದ್ದ ನಟಿ ಚೈತ್ರಾ ಜೆ. ಆಚಾರ್ ಇದೀಗ ಕರಾವಳಿ ಭಾಗದ ಪ್ರೇಮಕಥೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹೊಸ ಧಾಟಿಯ ಕಥೆಯಲ್ಲಿ ತಮ್ಮ ಛಾಪು ಒತ್ತಲಿದ್ದಾರೆ.

'ಮಾರ್ನಮಿ' ಸಿನಿಮಾದಲ್ಲಿ ಚೈತ್ರಾ, ನಟ ರಿತ್ವಿಕ್ ಅವರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ.

'ಕಥೆ ನನಗೆ ಬಹಳ ಇಷ್ಟವಾಗಿತ್ತು. ಆದರೆ ಡೇಟ್ ಸಮಸ್ಯೆಯಿಂದ ಸುಮ್ಮನಾಗಿದ್ದೆ. ಮತ್ತೆ ಆ ಕಥೆ ನನ್ನ ಬಳಿಯೇ ಬಂತು. ಅದ್ಭುತವಾದ ಕಥೆ. ತಾಂತ್ರಿಕವಾಗಿಯೂ ಸಿನಿಮಾ ಗಟ್ಟಿಯಿದೆ. ರಿಷಿತ್ ಅವರು ಕಥೆ ಹೇಳುತ್ತಿದ್ದಾಗ ಎಲ್ಲಿಯೂ ಬೋರ್ ಆಗಲಿಲ್ಲ. ಜೊತೆಗೆ ಚರಣ್ ರಾಜ್ ಅವರ ಸಂಗೀತ ಇರುವುದೂ ಪ್ಲಸ್ ಪಾಯಿಂಟ್' ಎಂದು ಕಥೆಯ ಬಗ್ಗೆ ಹೇಳಿದ್ದಾರೆ.

ತುಳುನಾಡಿನ ಪ್ರಮುಖ ಹಬ್ಬಗಳಲ್ಲೊಂದು 'ಮಾರ್ನಮಿ'. ದುಷ್ಟಶಕ್ತಿಯ ಸಂಹಾರದ ಪ್ರತೀಕವಾದ ಈ ಹಬ್ಬವನ್ನೇ ಶೀರ್ಷಿಕೆಯಾಗಿಸಿಕೊಂಡು ಚಿತ್ರ ಸೆಟ್ಟೇರುತ್ತಿದೆ. ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಿಶಿತ್ ಶೆಟ್ಟಿ ಚೊಚ್ಚಲ ನಿರ್ದೇಶನದ ಚಿತ್ರವಿದು.

ಒಂದಷ್ಟು ಸಿನಿಮಾಗಳಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವ ಅವರು, ಕರಾವಳಿ ಭಾಗದ ಹುಲಿವೇಷ, ಆಚರಣೆಗಳ ಜೊತೆಗೆ ಪ್ರೇಮಕಥೆಯನ್ನು ಹೊಂದಿರುವ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಅಕ್ಟೋಬರ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಮಂಗಳೂರು ಸುತ್ತ ಚಿತ್ರೀಕರಣ ಮಾಡುವ ಯೋಜನೆ ಹಾಕಿಕೊಂಡಿರುವುದಾಗಿ ರಿಶಿತ್ ಶೆಟ್ಟಿ ಮಾಹಿತಿ ನೀಡಿದ್ದಾರೆ.

ಚರಣ್ ರಾಜ್ ಈ ಚಿತ್ರದ ಸಂಗೀತ ನಿರ್ದೇಶಕರಾಗಿದ್ದು, ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಯಶ್ ಶೆಟ್ಟಿ, ಮೈಮ್ ರಾಮದಾಸ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.